# ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಚಿಕ್ಕಬಳ್ಳಾಪುರ, ಕಾರ್ಯಸ್ಥಾನ ಚಿಂತಾಮಣಿ.

## ಎಸ್.ಸಿ. ನಂಃ 128/2019

**ಫಿರ್ಯಾದುದಾರರುಃ** **ಕರ್ನಾಟಕ ರಾಜ್ಯದ ಪರವಾಗಿ (ಚಿಂತಾಮಣಿ ನಗರ ಪೋಲಿಸರು)**

**ವಿರುದ್ಧ**

**ಆರೋಪಿತರುಃ** **ಲೋಕೇಶ್ ಮತ್ತು ಇತರರು**

| | | | |
|---|---|---|---|
| **ಸಾಕ್ಷಿದಾರರ ಹೆಸರುಃ** | ರಾಜಮ್ಮ | ಪ್ರಾಸಾಃ | 12 |
| **ಗಂಡನ ಹೆಸರುಃ** | ಪದ್ಮನಾಭಯ್ಯ | ಚಾಸಾಃ | 20 |
| **ವಯಸ್ಸುಃ** | 60 ವರ್ಷ | ಪ್ರಮಾಣ ವಚನ ಭೋದಿಸಿದ ದಿನಾಂಕ | 08.07.2024 |
| **ಉದ್ಯೋಗಃ** | ವ್ಯವಸಾಯ | | |
| **ವಾಸ ಸ್ಥಳಃ** | ಚೊಕ್ಕಹಳ್ಳಿ ಗ್ರಾಮ, ಚಿಂತಾಮಣಿ ತಾಲ್ಲೂಕು. | | |

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

ನ್ಯಾಯಾಲಯದ ಮುಂದೆ ಇರುವ ಆರೋಪಿತರನ್ನು ನಾನು ಈ ಹಿಂದೆ ನೋಡಿರುವುದಿಲ್ಲ. ಮೃತ ಸರಸ್ವತಮ್ಮ ನನಗೆ ಗೊತ್ತು, ಆಕೆ ನನ್ನ ಚಿಕ್ಕಪ್ಪನ ಹೆಂಡತಿ. ಆಕೆ ಐದೂವರೆ ವರ್ಷದ ಹಿಂದೆ ಮೃತಪಟ್ಟಿರುತ್ತಾಳೆ. ಮೃತ ಸರಸ್ವತಮ್ಮ ಗಂಗಮ್ಮನ ದೇವಸ್ಥಾನದ ಪ್ರಸಾದವನ್ನು ತಿಂದು ರಾತ್ರಿಯೆಲ್ಲಾ ವಾಂತಿ ಮಾಡಿಕೊಂಡು, ಬೆಳಿಗ್ಗೆ ಚಿಂತಾಮಣಿಯ ಸುಮ ನರ್ಸಿಂಗ್ ಹೋಮ್ ಗೆ ಕರೆದುಕೊಂಡು ಹೋದೆವು. ನಂತರ ಆಕೆಯನ್ನು

ಚಿಂತಾಮಣಿ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ನಂತರ ಅಲ್ಲಿಂದ ಕೋಲಾರದ ಆರ್.ಎಲ್. ಜಾಲಪ್ಪ ಆಸ್ಪತ್ರೆಗೆ ಕರೆದುಕೊಂಡು ಹೋದೆವು. ಅಲ್ಲಿ ಆಕೆಗೆ ಚಿಕಿತ್ಸೆ ಫಲಕಾರಿಯಾಗದೇ ಮೃತಪಟ್ಟಿರುತ್ತಾಳೆ. ಪೋಲಿಸರಿಗೆ ಘಟನೆಯ ಬಗ್ಗೆ ಹೇಳಿಕೆ ಕೊಟ್ಟಿರುತ್ತೇನೆ.

**ಪಾಟೀ ಸವಾಲುಃ 2 ಮತ್ತು 4 ನೇ ಆರೋಪಿತರ ಪರ ಶ್ರೀ.ಎಸ್.ಆರ್.ಬಿ. ವಕೀಲರು ಏನು ಇರುವುದಿಲ್ಲವೆಂದು ತಿಳಿಸಿದ್ದಾರೆ.**

**ಪಾಟೀ ಸವಾಲುಃ 3 ನೇ ಆರೋಪಿ ಪರ ಶ್ರೀಮತಿ ಎಸ್.ಎನ್. ವಕೀಲರು ಏನು ಇರುವುದಿಲ್ಲವೆಂದು ತಿಳಿಸಿದ್ದಾರೆ.**

**ಮರು ವಿಚಾರಣೆಃ ..... ಇಲ್ಲ .....**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು) ಓ.ಹೇ.ಕೇ. ಸರಿ ಇದೆ.

ದಿಃ08.07.2024 **(ನಾಗವೇಣಿ)**
ಸ್ಥಳಃ ಚಿಂತಾಮಣಿ ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಬಳ್ಳಾಪುರ, ಕಾರ್ಯಸ್ಥಾನ ಚಿಂತಾಮಣಿ.